2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 35/2019

| | | |
|---|---|---|
| ಸಾಕ್ಷಿದಾರರ ಹೆಸರು | - ನವೀನ ಎಸ್.ಟಿ. | ಪಿಡಬ್ಲೂ -20 |
| ತಂದೆಯ ಹೆಸರು | - ತಿಪ್ಪೇಶಪ್ಪ | ಸಿಡಬ್ಲೂ -23 |
| ವಯಸ್ಸು | - 33 ವರ್ಷ | |
| ಉದ್ಯೋಗ | - ವ್ಯವಸಾಯ | |
| ವಾಸ ಸ್ಥಳ | - ಸೊಕ್ಕೆ, ಅಜ್ಜಂಪುರ ತಾ. | |

ದಿನಾಂಕಃ 27.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಆರೋಪಿತರ ಪರಿಚಯ ನನಗಿಲ್ಲ. ಚಾಸಾ.24 ರವರ ಪರಿಚಯ ನನಗಿಲ್ಲ.

2. ಈಗ ತೋರಿಸಿದ ಅಮಾನತು ಪಂಚನಾಮೆಯಲ್ಲಿ ನನ್ನ ಸಹಿ ಇದ್ದು, ಸದರಿ ಅಮಾನತು ಪಂಚನಾಮೆಯನ್ನು ನಿಪಿ.28 ಎಂದು ಸಾಕ್ಷಿಯ ಸಹಿಯನ್ನು ನಿಪಿ.28(ಎ) ಎಂದು ಗುರುತಿಲಾಯಿತು. ನಿಪಿ.28 ಕ್ಕೆ ಸುಮಾರು 3 ವರ್ಷಗಳ ಹಿಂದೆ ಅಜ್ಜಂಪುರ ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ. ಮೂರು ವರ್ಷಗಳ ಹಿಂದೆ ನಮ್ಮೂರಿನಲ್ಲಿ ಅಕ್ರಮವಾಗಿ ಮದ್ಯ ಮಾರಾಟವಾಗುತ್ತಿದ್ದ ಬಗ್ಗೆ ಪೋಲೀಸರಿಗೆ ತಿಳಿಸಲು ಹೋದಾಗ ಪೋಲೀಸರು ನಿಪಿ.28 ಕ್ಕೆ ನನ್ನ ಸಹಿ ಪಡೆದಿದ್ದಾರೆ. ಯಾವ ಕಾರಣಕ್ಕೆ ಪೋಲೀಸರು ನನ್ನ ಸಹಿ ಪಡೆದಿದ್ದಾರೆ ಗೊತ್ತಿಲ್ಲ. ನಿಪಿ.28 ರ ದಾಖಲೆಯನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿಲ್ಲ. ನನ್ನ ಸಮಕ್ಷಮ ನಿಪಿ.28 ರ ದಾಖಲೆಗೆ ಬೇರೆ ಯಾರೂ ಸಹಿ

ಮಾಡಿರುವುದಿಲ್ಲ. ಯಾವುದೇ ವಸ್ತುಗಳನ್ನು ನನ್ನ ಸಮಕ್ಷಮ ಪೋಲೀಸರು ಅಮಾನತು ಪಡಿಸಿಕೊಂಡಿರುವುದಿಲ್ಲ.

3. ಈಗ ತೋರಿಸಿದ ಛಾಯಚಿತ್ರಗಳನ್ನು ನೋಡುತ್ತಿದ್ದು ಸದರಿ ಛಾಯಚಿತ್ರದಲ್ಲಿ ನಾನು ಕೂಡ ಇದ್ದೇನೆ, ಸದರಿ ಛಾಯಚಿತ್ರವನ್ನು ನಿಪಿ.29 ಎಂದು ಗುರುತಿಸಲಾಯಿತು. ಯಾವ ಕಾರಣಕ್ಕೆ ನಿಪಿ.29 ವನ್ನು ಠಾಣೆಯಲ್ಲಿ ಸಂಗ್ರಹಿಸಿದರು ಎಂದು ಗೊತ್ತಿಲ್ಲ. ಈಗ ತೋರಿಸಿದ ಒಟ್ಟು ಲಕೋಟೆಗೆ ಅಂಟಿಸಿರುವ ಚೀಟಿಗಳಲ್ಲಿ ನನ್ನ ಸಹಿ ಇದೆ. ಸಾಕ್ಷಿ ಗುರುತಿಸಿದ ಲಕೋಟೆಗಳನ್ನು ತೆರೆದ ನ್ಯಾಯಾಲಯದಲ್ಲಿ ತೆಗೆದು ನೋಡಲಾಯಿತು. ಸಾಕ್ಷಿ ಗುರುತಿಸಿದ ಲಕೋಟೆಗಳನ್ನು ಕ್ರಮವಾಗಿ ನಿಪಿ.30 ರಿಂದ 32 ಎಂದು ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿಪಿ.30(ಎ) ಯಿಂದ 32(ಎ) ಎಂದು ಗುರುತಿಸಲಾಯಿತು. ನನಗೆ ಬೇರಾವುದೇ ಮಾಹಿತಿ ಇಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-

4. ದಿಃ 11.11.2018 ರಂದು ನನಗೆ ಹಾಗೂ ಚಾಸಾ.24 ರವರಿಗೆ ಈ ಪ್ರಕರಣದಲ್ಲಿ 1 ರಿಂದ 3 ನೇ ಆರೋಪಿತರು ಹಾಜರು ಪಡಿಸಿದ ಮೊಬೈಲುಗಳನ್ನು ಅಮಾನತು ಪಡಿಸಿಕೊಂಡು ಪಂಚನಾಮೆ ಕ್ರಮ ಜರುಗಿಸುವ ಕಾಲಕ್ಕೆ ಹಾಜರಿರಲು ತಿಳಿಸಿದ್ದರು ಎಂದರೆ ಸರಿಯಲ್ಲ. ನಾನು ಹಾಗೂ

ಚಾಸಾ.24 ರವರು ಠಾಣೆಗೆ ಹೋದಾಗ 1 ರಿಂದ 3 ನೇ ಆರೋಪಿತರು ಠಾಣೆಯಲ್ಲಿ ಹಾಜರಿದ್ದರು ಎಂದರೆ ಸರಿಯಲ್ಲ. ತನಿಖಾಧಿಕಾರಿಗಳು 1 ರಿಂದ 3 ನೇ ಆರೋಪಿತರು ಹಾಜರುಪಡಿಸಿದ ಈಗ ತೋರಿಸಿದ ಮೂರು ಮೊಬೈಲುಗಳನ್ನು ಅಮಾನತುಪಡಿಸಿಕೊಂಡು, ಸದರಿ ಮೊಬೈಲುಗಳ ಐಎಂಇಐ ನಂಬರು ಹಾಗೂ ಸಿಂ ನಂಬರುಗಳನ್ನು ನಮೂದಿಸಿ ರಾತ್ರಿ 11.30 ರಿಂದ 12.00 ಗಂಟೆವರೆ ನಿಪಿ.28 ರಂತೆ ಮಹಜರು ಜರುಗಿಸಿದ ನನ್ನ ಹಾಗೂ ಚಾಸಾ.24 ರವರ ಸಹಿ ಪಡೆದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಈಗ ತೋರಿಸಿದ ಮೂರು ಮೊಬೈಲುಗಳನ್ನು ಅಮಾನತುಪಡಿಸಿಕೊಂಡು ನಿಪಿ.30 ರಿಂದ 32 ರ ಲಕೋಟೆಗಳಲ್ಲಿಟ್ಟು ಪ್ಯಾಕ್ ಮಾಡಿ ಚೀಟಿ ಅಂಟಿಸಿ ನಮ್ಮ ಸಹಿಗಳನ್ನು ಪಡೆಯಲಾಗಿದೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪೋಲೀಸರು ಈಗ ತೋರಿಸಿದ ನಿಪಿ.29 ರ ಛಾಯಚಿತ್ರವನ್ನು ಸಂಗ್ರಹಿಸಿದ್ದಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಛಾಯಚಿತ್ರ ತೆಗೆದ ವಿಚಾರ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ ಪಿ.ಇ.ಎಸ್. ವಕೀಲರಿಂದ **1 ನೇ** ಆರೋಪಿ ಪರವಾಗಿ</u>

5. ನಾನು ಮಧ್ಯ ಮಾರಾಟದ ವಿರುದ್ಧ ದೂರು ಸಲ್ಲಿಸಲು ಹೋದಾಗ ಪೋಲೀಸರು ನನ್ನ ಸಹಿ ಪಡೆದಿದ್ದಾರೆ ಎಂದರೆ ನಿಜ.

ಅಕ್ರಮ ಮದ್ಯ ಮಾರಾಟದ ವಿರುದ್ದ ಸಲ್ಲಿಸಿದ ದೂರಿಗೆ ಸಹಿ ಮಾಡಬೇಕು ಎಂದು ಕೇಳಿದ್ದರಿಂದ ನಾನು ಸಹಿ ಮಾಡಿದ್ದೇನೆ ಎಂದರೆ ನಿಜ. ಮಾರಾಟದ ವಿರುದ್ದ ದೂರು ಸಲ್ಲಿಸಿದ್ದರಿಂದ ಪೋಲೀಸರು ನಿಪಿ.29ರ ಛಾಯಚಿತ್ರವನ್ನು ಸಂಗ್ರಹಿಸಿದ್ದಾರೆ ಎಂದರೆ ನಿಜ.

**ಪಾಟೀ ಸವಾಲುಃ ಶ್ರೀ ಬಿ.ಎಂ.ಎಲ್.ಜಿ., ವಕೀಲರಿಂದ 2 ರಿಂದ 4 ನೇ ಆರೋಪಿ ಪರವಾಗಿ**

1 ನೇ ಆರೋಪಿಯ ಪಾಟೀ ಸವಾಲನ್ನು ಅಳವಡಿಸಿ ಕೊಂಡಿದ್ದಾರೆ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ